**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಕ್ರಿ.ಮಿಸ್.ನಂ.24/2025**

ಆರ್.ಡಬ್ಲ್ಯು 1

ಸಾಕ್ಷಿದಾರರ ಹೆಸರು - **ಮಹಮ್ಮದ ಜಾಫರ ಶಾ**

ತಂದೆಯ ಹೆಸರು - ನನ್ನು ಅಬ್ದುಲ್ ಖಾದರ

ವಯಸ್ಸು - 52 ವರ್ಷ

ಉದ್ಯೋಗ - ಮನೆವಾರ್ತೆ

ವಾಸ್ತವ್ಯ - ಶಿರೂರು, ಬೈಂದೂರು ತಾಲೂಕು

(ಇಂದು ದಿನಾಂಕಃ 24-**12-2025** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ -ಶ್ರೀ. ಜಿ.ಜಿ.ಜಿ. ವಕೀಲರಿಂದಃ**

ನಾನು ಜೀವನಾಂಶದ ಕುರಿತಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. 1 ಹಾಗೂ 2ನೇ ಅರ್ಜಿದಾರರು ನನ್ನ ಮಕ್ಕಳಾಗಿರುತ್ತಾರೆ. ನನ್ನ ಮಕ್ಕಳನ್ನು ನಾನು ನೋಡಿಕೊಳ್ಳಲು ತಯಾರ ಇದ್ದು, ಅವರ ವಿದ್ಯಾಭ್ಯಾಸ ಹಾಗೂ ಇನ್ನಿತರ ಖರ್ಚು ವೆಚ್ಚಗಳನ್ನು ನೋಡಿಕೊಳ್ಳಲು ತಯಾರ ಇದ್ದೇನೆ ಹಾಗೂ ನಾನು ನನ್ನ ಮಗಳ ಮದುವೆಯ ಖರ್ಚು ವೆಚ್ಚಗಳನ್ನು ಸಹ ನೋಡಿಕೊಳ್ಳಲು ತಯಾರ ಇದ್ದೇನೆ.

ನಾನು ಈ ಮೊದಲು ವಿದೇಶದಲ್ಲಿ ಕೆಲಸ ಮಾಡುತ್ತಿದ್ದೇನು. ಈಗ ಪ್ರಸ್ತುತ ನಾನು ನಿರುದ್ಯೋಗಿಯಾಗಿರುತ್ತೇನೆ. ನಾನು ವಿದೇಶದಲ್ಲಿ ಕರ್ತವ್ಯದಲ್ಲಿ ಇದ್ದಂತಹ ಸಮಯದಲ್ಲಿ ನನ್ನ

R.W.1

ಹೆಂಡತಿ ಮಕ್ಕಳನ್ನು ನಾನೇ ನೋಡಿಕೊಳ್ಳುತ್ತಿದ್ದೇನು. ನಾನು ಮಕ್ಕಳ ವಿದ್ಯಾಭಾಸ, ಊಟ ಉಪಚಾರದ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೇನು. ನಾನು ನನ್ನ ಮಾವನ ಖಾತೆಗೆ ಸದ್ರಿ ಹಣವನ್ನು ಹಾಕುತ್ತಿದ್ದೇನು. ನನ್ನ ಹೆಂಡತಿಯು ಮೃತರಾಗಿರುತ್ತಾರೆ. ನಾನು ನನ್ನ ಹೆಂಡತಿಯು ಮೃತರಾದ ನಂತರ ನಾನು ನನ್ನ ಮಕ್ಕಳೊಂದಿಗೆ ಮಾತನಾಡಲು ದೂರವಾಣಿ ಕರೆಯನ್ನು ಮಾಡುತ್ತಿದ್ದಾಗ ನನಗೆ ನನ್ನ ಮಕ್ಕಳ ಬಳಿ ಮಾತನಾಡಲು ಬಿಡದೇ ಬೈಯುತ್ತಿದ್ದರು.

ನನ್ನ ಅತ್ತೆ ಹಾಗೂ ಮಾವನವರಿಗೆ ವಯಸ್ಸಾಗಿದ್ದು, ಮಕ್ಕಳನ್ನು ನೋಡಿಕೊಳ್ಳಲು ಸಾಧ್ಯವಾಗದೇ ಇರುವ ಕಾರಣ ಮಕ್ಕಳನ್ನು ನನ್ನ ವಶಕ್ಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಅರ್ಜಿಗೆ ಸಂಬಂಧಿಸಿದಂತೆ ನಾನು ಕೆಲವೊಂದು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

1. Attested copy of Passport ಹಾಜರುಪಡಿಸಿದ್ದು, ಅದನ್ನು **R.1** ಎಂದು ಗುರುತಿಸಲಾಯಿತು.

2. ನನ್ನ ಅನಾರೋಗ್ಯದ ನಿಮಿತ್ತ ನಾನು ಆಸ್ಪತ್ರೆಗೆ ದಾಖಲಾಗಿದ್ದು, ಅದನ್ನು **R.2** ಎಂದು ಗುರುತಿಸಲಾಯಿತು.

3. ವಿದೇಶದಲ್ಲಿ ಕರ್ತವ್ಯದಲ್ಲಿ ಇದ್ದಾಗ ಹಣ ಸಂದಾಯ ಮಾಡಿದ ಬಗ್ಗೆ 3 ರಶೀದಿಗಳನ್ನು ಹಾಜರುಪಡಿಸಿರುತ್ತಾರೆ.

**ಆರ್.1** ರ ಮೂಲ ಪ್ರತಿಯನ್ನು ಮೂಲ ದಾಖಲಾತಿಯೊಂದಿಗೆ ತಾಳೆ ಮಾಡಿ ಪರಿಶೀಲಿಸಿದ ನಂತರದಲ್ಲಿ ಮೂಲ ದಾಖಲಾತಿಯನ್ನು ಅರ್ಜಿದಾರರಿಗೆ ಹಿಂದಿರುಗಿಸಲಾಯಿತು.

**ಆರ್. 2** ನ್ನು ಅರ್ಜಿದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

R.W.1

**(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ